**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು 842-2022**

**ಸಿ.ಡಬ್ಲ್ಯು -9, ಪಿ.ಡಬ್ಲ್ಯು-2**

**ಸಾಕ್ಷಿದಾರರ ಹೆಸರು** : ದೂದಾ ನಾಯ್ಕ
ತಂದೆಯ **ಹೆಸರು** : ರೂಪ್ಲ ನಾಯ್ಕ
**ವಯಸ್ಸು** : 47 ವರ್ಷ
**ಉದ್ಯೋಗ** : ಮುಖ್ಯ ಪೇದೆ, ಆನಂದಪುರ ಪೊಲೀಸ್ ಠಾಣೆ,
**ವಾಸ** : ಆನಂದುಪರ, ಸಾಗರ ತಾಲ್ಲೂಕು

**ಪ್ರಮಾಣೀಕರಿಸಿದ ದಿನಾಂಕ :12.06.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2019 ರಿಂದ 2025 ರವರೆಗೆ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:09.05.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಾಗರದ ಸರ್ಕಾರಿ ಆಸ್ಪತ್ರೆಯಿಂದ ಬಂದ ಹೆಚ್ ಎಂ ಆರ್ ವರದಿಯ ಆಧಾರದ ಮೇಲೆ ನಾನು ಸಂಜೆ 5.30 ಗಂಟೆಗೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿರುತ್ತೇನೆ. ಸಂಜೆ 5.45 ರಿಂದ 6.15 ರವರೆಗೆ ಚಾಸ 1 ರವರ ಹೇಳಿಕೆ ಪಡೆದುಕೊಂಡು ಠಾಣೆಗೆ ಹಿಂದಿರುಗಿ ಹೇಳಿಕೆಯ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು ಠಾಣಾ ಗುನ್ನ ಸಂಖ್ಯೆ:200/2022 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

3. ದಿ:10.05.2022 ರಂದು ಚಾಸ 1 ರವರು ತೋರಿಸಿದ ಸ್ಥಳದಲ್ಲಿ ಚಾಸ 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯ ಕ್ರಮವನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಫೋಟೋ ತೆಗೆದಿರುತ್ತೇನೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಚಾಸ 4 ರಿಂದ 6 ರವರ ಹೇಳಿಕೆಗಳನ್ನು ಮತ್ತು ಚಾಸ 1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ

4. ದಿ:22.05.2022 ರಂದು 1ನೇ ಆರೋಪಿ ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು, ನಾನು 1ನೇ ಆರೋಪಿಯ ದಸ್ತಗಿರಿ ಕ್ರಮವನ್ನು ಅನುಸರಿಸಿರುತ್ತೇನೆ.

5. ದಿ:27.05.2022 ರಂದು 2ನೇ ಆರೋಪಿಗೆ ನಾನು ದಂಡ ಪ್ರಕ್ರಿಯಾ ಸಂಹಿತೆ ಕಲಂ 41(ಎ) ರಡಿಯಲ್ಲಿ ನೋಟೀಸನ್ನು ನೀಡಿರುತ್ತೇನೆ.

6. ದಿ:29.05.2022 ರಂದು ಚಾಸ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಸೂಕ್ತ ಸಾಕ್ಷಾಧಾರಗಳು ದೊರೆತಿದ್ದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

7. ಸಾಕ್ಷಿಯು ನಿಪಿ 1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚರಿಗೆ ನೀಡಿದ ನೋಟೀಸ್ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚರಿಗೆ ನೀಡಿದ ನೋಟೀಸ್ ಅನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 65 ಬಿ ಪ್ರಮಾಣ ಪತ್ರವನ್ನು ಮತ್ತು ಆದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, 65 ಬಿ ಪ್ರಮಾಣ ಪತ್ರವನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ನೇ ಆರೋಪಿಗೆ ನೀಡಿರುವ ನೋಟೀಸನ್ನು ಮತ್ತು ಆದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, 2 ನೇ ಆರೋಪಿಗೆ ನೀಡಿದ ನೋಟೀಸ್ ಅನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣ ಪತ್ರವನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ಆ ದಿನ ನಾನು ದಸ್ತಗಿರಿ ಕ್ರಮವನ್ನು ಜರುಗಿಸಿದ 1 ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಆರೋಪಿತನ ಸ್ಥಾನದಲ್ಲಿರುತ್ತಾನೆ. ನಾನು ನೋಟೀಸನ್ನು ನೀಡಿದ 2 ನೇ ಆರೋಪಿ ನ್ಯಾಯಾಲಯದ ಮುಂದೆ ಇರುವುದಿಲ್ಲ, ಆತನನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ**

1. ದೂರನ್ನು ನೀಡುವ ದಿನ ದೂರುದಾರರು ನಮ್ಮ ಠಾಣೆಗೆ ಬಂದಿರಲಿಲ್ಲ. ಚಾಸ 1 ರವರಿಗೆ ಎಲ್ಲೆಲ್ಲಿ ಹೊಡೆತ ಬಿದ್ದಿದೆ ಎಂದು ನಾನು ವಿಚಾರಣೆ ಮಾಡಿರುತ್ತೇನೆ. ನಾನು ನೋಡಿದ ಮಟ್ಟಿಗೆ ಚಾಸ 1 ರವರ ಮೈ ಮೇಲೆ ಕಾಣುವಂತಹ ಗಾಯಗಳು ಕಂಡು ಬರಲಿಲ್ಲ. ಚಾಸ 1, 4 ರಿಂದ 6 ರವರ ವಿರುದ್ಧ 1ನೇ ಆರೋಪಿಯ ತಾಯಿ ದೂರನ್ನು ನೀಡಿರುವ ವಿಷಯ ನನಗೆ ಗೊತ್ತು. 1ನೇ ಆರೋಪಿ ಮತ್ತು ಚಾಸ 1 ರವರ ಕುಟುಂಬದ ನಡುವೆ ಸಿವಿಲ್ ವ್ಯಾಜ್ಯವಿರುವ ಕುರಿತು ನನಗೆ ಮಾಹಿತಿ ಇಲ್ಲ. ನಾವು ಇಬ್ಬರು ಪೊಲೀಸರು ಪಂಚನಾಮೆಗೆಂದು ಘಟನಾ ಸ್ಥಳಕ್ಕೆ ಸ್ವಂತ ದ್ವಿ ಚಕ್ರ ವಾಹನದಲ್ಲಿ ಹೋಗಿದ್ದೆವು.

2. ದಿಃ10.05.2022 ರಂದು ಚಾಸ 1 ರವರ ಕಡೆಯವರು ಮಧ್ಯಾಹ್ನ 1 ಗಂಟೆಗೆ ನನಗೆ ಕರೆ ಮಾಡಿ ಆಸ್ಪತ್ರೆಯಿಂದ ಬಂದಿದ್ದೇವೆ ಎಂದು ತಿಳಿಸಿದ್ದರು. ನಾನು ಠಾಣೆಯನ್ನು ಬಿಟ್ಟಾಗ ಸಮಯ ಮಧ್ಯಾಹ್ನ 2.30 ಗಂಟೆಯಾಗಿತ್ತು. ನಮ್ಮ ಠಾಣೆಯಿಂದ ಘಟನಾ ಸ್ಥಳ ಸುಮಾರು 4 ಕಿ ಮೀ ಅಂತರದಲ್ಲಿರುತ್ತದೆ. ನಮ್ಮ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಲು ಅಂದಾಜು 15 ರಿಂದ 20 ನಿಮಿಷ ಬೇಕಾಗುತ್ತದೆ. ನಾನು ನೇರವಾಗಿ ಘಟನಾ ಸ್ಥಳದ ಬಳಿ ಇರುವ ಈಡಿಗರ ಭವನದ ಬಳಿ ಹೋಗಿದ್ದೆ. ಪಂಚರನ್ನು ನಮ್ಮ ಸಿಬ್ಬಂದಿ ಕರೆದುಕೊಂಡು ಬಂದಿದ್ದರು. ಪಂಚರನ್ನು ಕರೆದುಕೊಂಡು ಬಂದ ಸಿಬ್ಬಂದಿಯ ಹೆಸರು ಈಗ ನನಗೆ ನೆನಪಿಲ್ಲ. ನಮ್ಮ ಸಿಬ್ಬಂದಿ ಕರೆದಿದ್ದ ಪಂಚರು ಈಡಿಗರ ಭವನದ ಬಳಿ ಬಂದರು. ನಾವು ಹೋದ 5-10 ನಿಮಿಷದ ನಂತರ ಪಂಚರು ಬಂದರು. ಪಂಚರಿಗೆ ನೋಟೀಸನ್ನು ಜಾರಿ ಮಾಡಲು ಎಷ್ಟು ಸಮಯ ಆಯಿತು ಎಂದು ನೆನಪಿಲ್ಲ. ಪಂಚರಿಗೆ ನೀಡಿದ ನೋಟೀಸ್ ನಲ್ಲಿ ಸಮಯದ ನಮೂದನೆ ಇರುವುದಿಲ್ಲ.

3. ಗಾಯದ ಪ್ರಮಾಣ ಪತ್ರದಲ್ಲಿ ಚಾಸ 1 ರವರ ಮೈ ಮೇಲೆ ಯಾವುದೇ ಗಾಯಗಳು ಕಂಡು ಬಂದಿಲ್ಲ ಎಂದು ನಮೂದನೆ ಇದೆ ಎಂದರೆ ಸರಿ. ಕಚ್ಚಾ ನಕಾಶೆಗೆ ಪಂಚರ ಸಹಿಯನ್ನು ಪಡೆದಿರುತ್ತೇನೆ. ಘಟನಾ ಸ್ಥಳಕ್ಕೆ ಎಲ್ಲರೂ ಸೇರಿ ನಾವು ಒಟ್ಟು 5 ಜನ ಹೋಗಿದ್ದೆವು. ಚಾಸ 1 ಮತ್ತು ಅವರ ಕಡೆಯವರು ಒಂದು ಬಾರಿ ಮಾತ್ರ ಠಾಣೆಗೆ ಬಂದಿರುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡ ಸಮಯದ ವಿವರಣೆ ಎಲ್ಲಿಯೂ ಇರುವುದಿಲ್ಲ ಎಂದರೆ ಸರಿ. ಸರ್ವೆ ಸಂಖ್ಯೆ 64 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಸಾಕ್ಷಿದಾರರಿಂದ ನಾನು ಪಡೆದುಕೊಂಡಿರುವುದಿಲ್ಲ.

ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಚಾಸ 1 ರವರ ಕುಟುಂಬದ ನಡುವೆ ಸಿವಿಲ್ ವ್ಯಾಜ್ಯವಿದ್ದು, ಅದರ ಕುರಿತು ಸರಿಯಾದ ತನಿಖೆಯನ್ನು ನಡಸದೇ ಚಾಸ 1 ರವರ ಕುಟುಂಬದವರಿಗೆ ಸಿವಿಲ್ ವ್ಯಾಜ್ಯದಲ್ಲಿ ಸಹಾಯವಾಗಲಿ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.